**ದಿನಾಂಕ 30.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಎಸ್.ಕೆ. ವಕೀಲರಿಂದಃ</u>**

ನನಗೆ ಎದುರುದಾರರು 2017 ರ ಮೇ ತಿಂಗಳಿನಲ್ಲಿ ಪರಿಚಯವಾಗಿರುತ್ತಾರೆ. ಮದುವೆ ಮಾಡಿಸುವ ಮಧ್ಯವರ್ತಿಗಳ ಮುಖಾಂತರ ಎದುರುದಾರ ಪರಿಚಯವಾಗಿರುತ್ತದೆ. 2017 ರ ಮೇ ತಿಂಗಳಿನಲ್ಲಿಯೇ ನನ್ನನ್ನು ನೋಡಲು ಬಂದಿರುತ್ತಾರೆ. ಮದುವೆ ಮತ್ತು ನಿಶ್ಚಿತಾರ್ಥ ಒಂದೇ ದಿನ ನಮ್ಮ ಮನೆಯಲ್ಲಿ ನೆರವೇರಿರುತ್ತವೆ. ಮದುವೆಗೂ ಪೂರ್ವದಲ್ಲಿ ನಮ್ಮ ಅಪ್ಪ, ಅಕ್ಕ ಹಾಗೂ ಮಕ್ಕಳು ಎದುರುದಾರರನ್ನು ನೋಡಲು ಅವರ ಮನೆಗೆ ಹೋಗಿರುತ್ತಾರೆ. ಎದುರುದಾರ ಮನೆ ನೋಡಲು ಹೋದವರು ಎದುರುದಾರ ಮನೆ ಮತ್ತು ಅವರು ಒಪ್ಪಿಗೆಯಾಗುತ್ತಾರೆ ಎಂದು ಹೇಳಿದ ನಂತರ ನಮ್ಮಗಳ ನಡುವೆ ಮದುವೆಯಾಗಿರುತ್ತದೆ. ಎದುರುದಾರ ಕಡೆಯಿಂದ ಮದುವೆಯ ದಿನ ಸುಮಾರು 15 ಜನ ಭಾಗವಹಿಸಿದ್ದರು. ಮದುವೆಯ ದಿನ ನಮ್ಮ ಮನೆಯವರು ಹಾಗೂ ನಾನು ಎದುರುದಾರ ಮನೆಗೆ ಹೋಗಿರುತ್ತೇವೆ. ನಮ್ಮ ಮನೆಯಿಂದ ಹುಡುಗನ ಮನೆಗೆ ಮದುವೆಯ ದಿನ ಸುಮಾರು 150 ಜನ ಹೋಗಿರುತ್ತೇವೆ. ಹೋದ ನಮಗೆಲ್ಲರಿಗೂ ಸಹ ಊಟ ಮತ್ತು ಉಳಿಯುವ ವ್ಯವಸ್ಥೆಯನ್ನು ಎದುರುದಾರ ಮನೆ ಕಡೆಯವರು ಮಾಡಿದ್ದರು. ಮದುವೆಯ ಮರುದಿನ ನಡೆದ ಆರತಕ್ಷತೆಗೆ ಬಂದಿದ್ದ ನಮ್ಮ ಗ್ರಾಮ ಬಂಧು ಬಾಂದವರು ವಾಪಸ್ಸು ಮರಳಿರುತ್ತಾರೆ. ನಾನು ಮಾತ್ರ ಎದುರುದಾರ ಮನೆಯಲ್ಲಿಯೇ ಉಳಿದಿದ್ದೆ.

2. ಎದುರುದಾರರು ಪದವಿ ವಿದ್ಯಾಬ್ಯಾಸ ಮುಗಿಸಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ. ಎದುರುದಾರರು ಮದುವೆಗಾಗಿ ಒಂದು ತಿಂಗಳು ರಜೆ ಹಾಕಿದ್ದು, ಸದರಿ ರಜೆಯ ಅವದಿಯಲ್ಲಿ ಅವರು ಮನೆಯಲ್ಲಿಯೇ ಉಳಿದಿದ್ದರು ಎಂದರೆ ಸರಿಯಲ್ಲ. ಅವರು ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ನಮಗೆ ಸುಳ್ಳು ಹೇಳಿ ಮದುವೆಯಾಗಿರುತ್ತಾರೆ. ನಾನು ಮದುವೆಯಾಗಿ 14 ದಿನಗಳು ಮಾತ್ರ ಗಂಡನ ಮನೆಯಲ್ಲಿದ್ದೆ. ನಮ್ಮ ಮದುವೆಯಾದ ಎರಡು ದಿನಗಳ ನಂತರ ಎದುರುದಾರರು ನಮ್ಮ ತವರು ಮನೆಗೆ ಬಂದು ಒಂದು ದಿನ ಉಳಿದಿದ್ದು ಮಾರನೇ ದಿನ ಅವರ ಮನೆಗೆ ಹೋಗಿರುತ್ತಾರೆ. ನಾನು ಕೂಡಾ ಅವರೊಟ್ಟಿಗೆ ಗಂಡನ ಮನೆಗೆ ವಾಪಸ್ಸು ಹೋಗಿರುತ್ತೇನೆ. ಮದುವೆಯಾದ ಪ್ರಾರಂಭದಲ್ಲಿ ಎದುರುದಾರರು ನನ್ನೊಟ್ಟಿಗೆ ಸೇರುವುದಾಗಲೀ, ಇರುವುದಾಗಲೀ ಮಾಡುತ್ತಿರಲಿಲ್ಲ. ಹೀಗೆ ಸುಮಾರು 12-13 ದಿನ ಕಳೆದ ನಂತರ ನಾನು ಈ ವಿಚಾರವನ್ನು ನನ್ನ ತಂದೆಯವರಿಗೆ ತಿಳಿಸಿರುತ್ತೇನೆ. ನಂತರ ನನ್ನ ತಂದೆಯವರು ಎದುರುದಾರರ ಮನೆಗೆ ಬಂದು ನನ್ನನ್ನು ತವರು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಎದುರುದಾರರು ಹಳ್ಳಿಯಲ್ಲಿ ವಾಸವಿದ್ದ ಕಾರಣ ಹಳ್ಳಿಯ ವಾತಾವರಣ ನನಗೆ ಹಿಡಿಸದೆ ನನ್ನ ತಂದೆಯವರನ್ನು ಬರಲು ಹೇಳಿ ಅವರೊಟ್ಟಿಗೆ ನಾನಾಗಿಯೇ ಸ್ವತಃ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ.

3. ಎದುರುದಾರರ ಮನೆಯಲ್ಲಿ ಎದುರುದಾರರು ಮತ್ತು ಅವರ ತಂದೆಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ. ನಾನು ಎದುರುದಾರರ ಮನೆಯಲ್ಲಿ ಸುಮಾರು 14 ದಿನಗಳ ಕಾಲ ಸುಖವಾಗಿ ದಾಂಪತ್ಯ ಜೀವನ ನಡೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಮದುವೆಗಾಗಿ ರಜೆ ಹಾಕಿದ ಕಾರಣದಿಂದ ಮನೆಯಲ್ಲಿ ಇದ್ದದನ್ನು ಹೊರತುಪಡಿಸಿ ಅವರು ಕೆಲಸ ಮಾಡದೇ ಸುಮ್ಮನೆ ಮನೆಯಲ್ಲಿ ಕುಳಿತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಎದುರುದಾರರ ಮನೆಯಿಂದ ಬರುವಾಗ ಎದುರುದಾರರು ನನ್ನನ್ನು ನಿಲ್ಲುವಂತೆ ಹೇಳಿರುವುದಿಲ್ಲ, ಆದರೆ ಅವರ ತಂದೆಯವರು ಹೋಗಬೇಡಿ ಎಂದು ಹೇಳಿರುತ್ತಾರೆ. ನಾನು ಸ್ವ ಇಚ್ಛೆಯಿಂದ ನನ್ನ ಗಂಡನ ಮನೆಯನ್ನು ಬಿಟ್ಟು ತವರು ಮನೆಗೆ ಬಂದಿರುತ್ತೇನೆ, ಹಲವು ಬಾರಿ ಎದುರುದಾರರು ನನ್ನನ್ನು ಒಟ್ಟಿಗೆ ಸಂಸಾರ ಮಾಡೋನ ಬಾ ಎಂದು ಕರೆದರೂ ಸಹ ನಾನೇ ಸ್ವತಃ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಬಡವರಾಗಿದ್ದು ನಾನು ಶ್ರೀಮಂತ ಕುಟುಂಬದಿಂದ ಬಂದವಳಾದ ಕಾರಣ ಎದುರುದಾರರ ಮನೆಯಲ್ಲಿ ನಾನು ಹೊಂದಿಕೊಂಡು ಹೋಗಲು ಆಗದೇ ನಾನೇ ಸ್ವತಃ ಎದುರುದಾರರ ಮನೆಯನ್ನು ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರಿಗೂ 35 ಎಕರೆ ಜಮೀನು ಇರುತ್ತದೆ ಎನ್ನುತ್ತಾರೆ.

4. ಎದುರುದಾರರಿಗೆ ಕೇವಲ 2 ಎಕರೆ ಜಮೀನು ಇದ್ದು ಉಳಿದ ಜಮೀನು ಎದುರುದಾರರ ತಂದೆಯ ಸಹೋದರಿಯರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಾನು ಸ್ವತಃ ಹೋಗಿ ನೋಡಿರುತ್ತೇನೆ, ಈ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ, ಎದುರುದಾರರಿಗೆ ಗದ್ದೆ, ಕಾಫಿ, ಮೆಣಸು ಕೃಷಿ ಸೇರಿ ಒಟ್ಟು 35 ಎಕರೆ ಜಮೀನು ಇರುತ್ತದೆ ಎನ್ನುತ್ತಾರೆ. ಎದುರುದಾರರಿಗೆ ಸೇರಿದ 2 ಎಕರೆ ಜಮೀನಿನಲ್ಲಿ ಯಾವುದೇ ಆದಾಯ ಬರುವ ಕೃಷಿ ಇಲ್ಲ ಎಂದರೆ ಸರಿಯಲ್ಲ. ಎದುರುದಾರರ ಜಮೀನುಗಳನ್ನು ಎದುರುದಾರರ ಅಕ್ಕ ನನಗೆ ತೋರಿಸಿರುತ್ತಾರೆ.

5. ನಾನು ಎದುರುದಾರರಿಂದ ವಿಚ್ಛೇದನ ಕೋರಿ ಮಾನ್ಯ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಬೆಳ್ತಂಗಡಿಯಲ್ಲಿ 2 ಅರ್ಜಿ ಸಲ್ಲಿಸಿರುತ್ತೇನೆ. 1ನೇ ಅರ್ಜಿಯಲ್ಲಿ ಎದುರುದಾರನು ಮಾನಸಿಕ ಅಸ್ವಸ್ಥ ಎಂಬ ಕಾರಣದಿಂದ ವಿಚ್ಛೇದನ ಕೋರಿರುತ್ತೇವೆ. ಈ ಅರ್ಜಿಯಲ್ಲಿ ನಾವು ಸೂಚಿಸಿದ ಕಾರಣಗಳು ಊರ್ಜಿತವಾಗಿರುವುದಿಲ್ಲ ಎಂದು ಮಾನ್ಯ ನ್ಯಾಯಾಲಯವು ಸದರಿ ಅರ್ಜಿಯನ್ನು ವಜಾ ಮಾಡಿರುತ್ತದೆ ಎಂದರೆ ಸರಿಯಲ್ಲ. ನಂತರ ನಾವು 2022 ನೇ ಇಸ್ವಿಯಲ್ಲಿ ವಿಚ್ಛೇದನ ಕೋರಿ ಮತ್ತೊಂದು ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ 2ನೇ ಅರ್ಜಿಯಲ್ಲಿ ಎದುರುದಾರರಿಗೆ ನೋಟಿಸ್ ಜಾರಿಯಾಗದೆ ಎದುರುದಾರರ ವಿರುದ್ಧ ಏಕಪಕ್ಷಿಯ ಆದೇಶವಾಗಿ ನನ್ನ ಪರವಾಗಿ ವಿಚ್ಛೇದನ ಡೀಕ್ರಿ ಆಗಿರುತ್ತದೆ ಎಂದರೆ ಸರಿ. ನನಗೆ ಮಾನ್ಯ ನ್ಯಾಯಾಲಯದಿಂದ ವಿಚ್ಛೇದನ ಡೀಕ್ರಿಯಾದ 2 ತಿಂಗಳ ನಂತರ ಪ್ರಸ್ತುತ ಈ

ಫ್ರಾಸಾ-1

ಅರ್ಜಿಯನ್ನು ಸಲ್ಲಿಸಿರುತ್ತೇನೆ. ನನಗೆ ಪ್ರಸ್ತುತ ಎರಡನೆ ಮದುವೆಯಾಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ವಿಚ್ಛೇದನದ ನಂತರ 2ನೇ ಮದುವೆಯಾಗಿ ಅವರಿಗೆ ಮಗು ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ಪವಿತ್ರಾ ಎಂಬ ಹುಡುಗಿಯನ್ನು ಮದುವೆಯಾಗಿ ವಿಹಾನ್ ಎಂಬ ಗಂಡು ಮಗು ಜನಿಸಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ದುಡಿದು ಅವರ ತಂದೆ ಹಾಗೂ ಹೆಂಡತಿ ಮಗುವನ್ನು ಸಾಕಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರಿಗೆ ಕೇವಲ ರೂ.10,000/- ಸಂಬಂಳ ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ಬಿ.ಪಿ.ಎಲ್. ಕುಟುಂಬಕ್ಕೆ ಸೇರಿದವರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಾಖಲೆಗಳನ್ನು ನೋಡಿರುತ್ತೇನೆ ಎನ್ನುತ್ತಾರೆ. ಈ ಅರ್ಜಿಯಲ್ಲಿ ಎದುರುದಾರರು ಪ್ರತಿ ತಿಂಗಳು ರೂ.15,000/- ಜೀವನಾಂಶ ನೀಡಬೇಕು ಎಂದು ಕೇಳಿರುತ್ತೇನೆ. ಎದುರುದಾರರ ಆರ್ಥಿಕ ಪರಿಸ್ಥಿತಿಯನ್ನು ನಾನು ಅವಲೋಕಿಸದೆ ಮನಬಂದಂತೆ ಜೀವನಾಂಶ ಕೇಳಿ ಎದುರುದಾರ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ನಾನು ವಿಚ್ಛೇದನ ಅರ್ಜಿಯಲ್ಲಿಯೂ ಸಹ ಎದುರುದಾರರು ಪರಿಹಾರ ಕೊಡಬೇಕು ಎಂದು ಕೇಳಿಕೊಂಡಿರುತ್ತೇನೆ. ಈ ಬಗ್ಗೆ ಮಾನ್ಯ ನ್ಯಾಯಾಲಯವು ಪರಿಹಾರದ ಬಗ್ಗೆ ಆದೇಶ ಮಾಡಿರುವುದಿಲ್ಲ. ನಾನು ನನ್ನ ವಿಚ್ಛೇದನ ಅರ್ಜಿಯಲ್ಲಿ ಪರಿಹಾರವಾಗಿ ಹಣವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈಯಕ್ತಿಕವಾಗಿ ಕೆಲಸ ಮಾಡುತ್ತಿದ್ದು ಹಾಗೂ ನನ್ನ ತಂದೆ ತಾಯಿಯವರಿಗೆ ಕೃಷಿ ಜಮೀನು ಇದ್ದು ಇವುಗಳಿಂದ ಹೆಚ್ಚು ಆದಾಯ ಇರುತ್ತದೆ ಎಂದರೆ ಸರಿಯಲ್ಲ. ನಾನು ಮದುವೆಯ ಪೂರ್ವದಲ್ಲಿ ಬೆಂಗಳೂರಿನಲ್ಲಿ ಅಡುಗೆಯ ಕೆಲಸ ಮಾಡುತ್ತಿದ್ದೆ ಆದರೆ ಈಗ ತಂದೆ ತಾಯಿಯವರನ್ನು ನೋಡಿಕೊಳ್ಳಬೇಕಾಗಿರುವುದರಿಂದ ಎಲ್ಲಿಯೂ ಸಹ ಕೆಲಸಕ್ಕೆ ಹೋಗಲು ಆಗುವುದಿಲ್ಲ ಎನ್ನುತ್ತಾರೆ. ನಾನು ಈಗಲೂ ಸಹ ಅಡುಗೆ ಹಾಗೂ ಟೈಲರಿಂಗ್ ಕೆಲಸ ಮಾಡುತ್ತಿದ್ದು ಅದರಿಂದ ಹೆಚ್ಚು ಆದಾಯ ಬರುತ್ತದೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ತೊಂದರೆ ಕೊಡಬೇಕು ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿದಷ್ಟು ಜೀವನಾಂಶ ನೀಡಲು ಎದುರುದಾರರಿಗೆ ಸಾಮರ್ಥ್ಯ ವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮರು ಮದುವೆಯಾಗಿರುವ ಕಾರಣ ಜೀವನಾಂಶ ಕೇಳಲು ಅರ್ಹಳಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಬ)